| | | | |
|---|---|---|---|
| ಶಿವಮೊಗ್ಗ ಡಿಸ್ಟ್ರಿಕ್ಟ್—ಶಿಕಾರಿಪುರದ ಕೋರ್ಟ | 10ನೇ ನವಂಬರ್ 1887. | ಹೆಚ್ಚು ಕಡಿಮೆ | 250 ಟ್ಯಗಳು. |
| ಅನಂತಪುರದ ಕೋರ್ಟ .. | 14ನೇ ಡಿಟೋ .. | 50 | ಡಿಟೋ |
| ಶಿವಮೊಗ್ಗ ಡಿಟೋ .. | 19ನೇ ಡಿಟೋ .. | 500 | ಡಿಟೋ |
| ತೀರ್ಥಹಳ್ಳಿ ಡಿಟೋ .. | 25ನೇ ಡಿಟೋ .. | 200 | ಡಿಟೋ |
| ಕಡೂರು ಡಿಸ್ಟ್ರಿಕ್ಟ್—ಚಿಕ್ಕಮಗಳೂರು ಕೋರ್ಟ | 1ನೇ ಡಿಸಂಬರ್ 1887. .. | 200 | ಡಿಟೋ |
| ಹಾಸನ ಡಿಸ್ಟ್ರಿಕ್ಟ್—ಹಾಸನ ಕೋರ್ಟ | 7ನೇ ಡಿಟೋ .. | 300 | ಡಿಟೋ |
| ಮೈಸೂರು ಡಿಸ್ಟ್ರಿಕ್ಟ್—ಶ್ರೀರಂಗಪಟ್ಟಣ ಕೋರ್ಟ | 12ನೇ ಡಿಟೋ .. | 800 | ಡಿಟೋ |
| ಹುಣಸೂರು ಡಿಟೋ .. | 16ನೇ ಡಿಟೋ .. | | |
| ಬೆಂಗಳೂರು ಡಿಸ್ಟ್ರಿಕ್ಟ್—ಬೆಂಗಳೂರು ಕೋರ್ಟ | 20ನೇ ಡಿಟೋ .. | 150 | ಡಿಟೋ |

ಪರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ವಾರ್ತಂಗಳ 34, 35ನೇ ನಂಬರು ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

---

## ಬೆಂಗಳೂರು ಡಿಸ್ಟ್ರಿಕ್ಟ್.

### ಬೆಂಗಳೂರು ಸಬ್ ಜಡ್ಜ್ ಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಕುಂಬಾರಪೇಟೇಲಿರತಕ್ಕ ದಲಾಲಖಾನನ ವಿಷಯದಲ್ಲಿ—.

ಸ|| 1887ನೇ ಇಸವಿ ದಿವಾಳೀ ಕೇಸ್ ಮಿ|| ನಂಬರ್ 638.

ಹುಕ್ಕುಂ.

ಮೇಲ್ಕಂಡ ದಲಾಲಖಾನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಮಿ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ದಲಾಲಖಾನನ್ನ ಖುದ್ದಾಗಿಯನ್ನು ಮತ್ತು ಸದರೀಯವನ ಲೇಣೇದಾರ್‌ರಾದ 6ನೇರ ತರಫ್ ಮಿ|| ಅಡ್ವೊಕೇಟ್ ನರಸಿಂಪಯ್ಯಂಗಾರ್‌ರಿಗೂ ದರ್ಯಾಫ್ತ್ ಮಾಡಲ್ಪಟ್ಟತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ, 1—2—3—4—5ನೇ ಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ದಲಾಲಖಾನನು ಹೊಂದುವದಕ್ಕೆ ಹಕ್ಕುದಾರನಾಗುವವರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೇಚನೇ ಮಾಡಿರುವವೆಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ನವಂಬರ್ 11ನೇ ತಾರೀಖಿನಲ್ಲಿ ಈ ಕೋರ್ಟು ವೊಹರ್‌ನಮ್ಮ ದಸ್ತಖತ್ತಸಿನೀ ಕೊಡಲ್ಪಟ್ಟತು.

ಸೂಲದಪಟ್ಟ.

| ನಂಬರ್. | ಲೇಣೇದಾರು) ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಜೊಜಲಗ್ಗೆ. | ಯಾವಾಗ ದೇಣೆ ತೀರಬೇಕಾದದ್ದು. | ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ. | ಷರಾ. |
|---|---|---|---|---|---|
| 1 | ಬೆಂಗಳೂರಲ್ಲಿರತಕ್ಕ ಮಹಮ್ಮದ್‌ಸಾಬ್ .. | 80 0 0 | 0 | ನಮೂದಿಲ್ಲ | |
| 2 | ಡಿಟೋ ಸಂ|| ನಂಜುಂಡಪ್ಪ .. | 35 0 0 | ಡಿಟೋ | ಡಿಟೋ | |
| 3 | ಡಿಟೋ ದಿಬ್ಬೂರು ವೀರಕೆಟ್ಟ .. | 70 0 0 | ಡಿಟೋ | ಡಿಟೋ | |
| 4 | ಆನೇಕಲ್ ಮುನಿಸಾಮಪ್ಪ .. | 70 0 0 | ಡಿಟೋ | ಡಿಟೋ | |
| 5 | ಮಹಮ್ಮದಲ್ಲೀಸಾಬಿಗೆ .. | 20 0 0 | ಡಿಟೋ | ಡಿಟೋ | |
| 6 | ರಾಣಾಶಿಂಗನಕೋಟೆ ಲಿಂಗಂಣ .. | 194 4 0 | ಡಿಟೋ | ಡಿಕರೀ ಮೊಬಲಗು | |
| | ಜುಮ್ಲಾ .. | 469 4 0 | | | |

ಸಿ. ಕೈನ್ಸ್,
ಸಬ್ ಜಡ್ಜ್.

---

ತಾರೀಖು 10ನೇ ನವೆಂಬರ್ 1887.

ಸ್ಯ 1888ನೇ ಇಸವಿ ಜನವರೀ ಗುರ್ಕೇಲಾಗಾಯಿತು 1889ನೇ ಇಸವಿ ಡಿಶಂಬರ್ 31ರ ವರಿಗೆ ಇದರಡಿ ವಿವರಿಸಲ್ಪಟ್ಟ ಮೇರೆ ಎರಡು ಸಾಲಿಗೆ ಬೆಂಗಳೂರು ಡಿಸ್ಟ್ರಿಕ್ಟು ಗವರ್ಮೆಂಟ್ ಜಂಗಲ್‌ಗಳಿಂದ ಸಾತ್‌ಮರಾಟೂ ರೆಯಿಲ್‌ವೇಗೆ ಸಾದೇ ಸರಬರಾಯಿ ಮಾಡುವ ಬಗ್ಯೆ ಸ್ಯ 1887ನೇ ಇಸವಿ ಡಿಶಂಬರ್ 10ನೇ ಮಕ್ಕುಂವರಿಗೆ ಯಿದರಡೀ ರುಜೂಮಾಡುವವರಿಂದ ಬಂದ್ ಮತ್ತು ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗದುಕೊಳ್ಳಲ್ಪಡುವವೆ:—(ಉಭಯ ಪಾರ್ಟಿಗಳಿಗೂ ತೃಪ್ತಿಕರವಾಗಿದ್ದ ಪಕ್ಷಕ್ಕೆ ಮೆತ್ತೊಂದು ಸಾಲಿಗೂ ಖಾಯಿಷ್ ಪ್ರಕಾರ ಕಂಟ್ರಾಕ್ಟು ರಿನ್ಯೂ ಮಾಡಿಕೊಳ್ಳಬಹುದಾಗಿಯಿರುತ್ತೆ.

| ನಂಬರು. | ಸ್ಟೇಷನ್. | ರೆಯಿಲ್ವೇ ಸ್ಟೇಷನಿಗೆ ಜಂಗಲ್‌ಗಳ ಸರಾಸರಿ ಫಾಸಲೆ ಮೈಲಿಗಳು. | ಮಾಹೇ ಬಂದಕ್ಕೆ ಟರ್ಗಳ ಸಂಖ್ಯೆ. |
|---|---|---|---|
| 1 | ಕ್ಲೋಸ್‌ಪ್ಯಾಟೆ | 14 | 300 |
| 2 | ಚನ್ನಪಟ್ಣ | 16 | 200 |
| | | ಜುಮ್ಲಾ | 500 |

2. ಕಂಟ್ರಾಕ್ಟರು ಪ್ರತಿ ಮಾಹೇ ಮೊದಲನೇ ದಿನದಲ್ಲಿ ಮೇಲ್ಕಂಡ ಟರ್ಗಳ ಸೌದೇ ಬಿಪ್ಪಿಸತಕ್ಕದ್ದು.

3. ಪ್ರತಿ ಸ್ಟೇಷನಿನ ಸರಬರಾಯಿ ಬಗ್ಯೆ ಕತರಾಯಿಸಲ್ಪಡತಕ್ಕ ಮರಗಳು ವ ಜಂಗಲಿನ ಪ್ರದೇಶ ಸುದಾ ಫಾರೆಸ್ಟು ಇಲಾಖೇಯವರಿಂದ ಗುರ್ತು ಮಾಡಲ್ಪಡುವದು.